Regd No M 1299 SATYAVADI

ಸಕಲ್ಯಾಣಕ್ಕಾಗಿ, ಭಾರತದ
ಸ್ವಾತಂತ್ರ್ಯಕ್ಕಾಗಿ, ಪ್ರಪಂಚದ
ಶಾಂತಿಗಾಗಿ ತಪಸ್ಸು ಮಾಡಿದ

ಸ್ಥಿತಪ್ರಜ್ಞ ಗಾಂಧೀಜಿ

ನಮ್ಮನ್ನಗಲಿದ 11 ನೆದಿನ

ಮಹಾತ್ಮರಿಗೆ
ಶ್ರದ್ಧಾಂಜಲಿ

ಅಗಲಿ ಪೋದೆಯಾ ।
ಮಹಾತ್ಮಾ ಅಗಲಿ ಪೋದೆಯಾ ॥

೧

ಭಾರತ ದಿವ್ಯ ಜ್ಯೋತಿ
ಧಾರುಣಿಯ ದಿವ್ಯ ಶಾಂತಿ
ಸಾರಸತ್ವದಮೆಲ ಮೂರ್ತಿ
ಚಾರುಚರಿತ ದಿವ್ಯ ಶಕ್ತಿ

೨

ಅರಿವರ್ಗದ ಕಷ್ಟಸಹಿಸಿ
ಹಿರಿಯ ಶಾಂತಿ ದೂತನೆನಿಸಿ
ಪರುಳ ವೈರಿಮನವ ಜಯಿಸಿ
ಧರಮಾತೆಯನುದ್ಧರಿಸಿ

೩

ಭರತ ಸ್ವಾತಂತ್ರ್ಯ ಜನಕ
ರ, ಶಾಂತಿ ಸಮರ ನಾಯಕ
ೀರಿದ ಸನ್ಮಾರ್ಗ ಶಿಕ್ಷಕ
ಯವದನ ಮನನೋಹಕ

೪

ವಾದ ಆತ್ಮಜ್ಯೋತಿ
ಅಮ ಲೋಕದಿಂದ ಸ್ಫೂರ್ತಿ
ವಿಮಲಶಾಂತಿ ಸಮರ ನೀತಿ
ನಮಗೆ ಬೀರುತಿರಲಿ ನಿತ್ಯ

೫

ೀನ ಸುತರ ಶ್ರದ್ಧಾಂಜಲಿ
ಮಾನ್ಯ ಪಿತನೆ ಕರುಣದಲಿ
ಮೌನದಿ ಸ್ವೀಕರಿಸುತಲಿ
ನ್ನಾನಂದಿಸು ಹೃದಯದಲಿ [ಸಂ]

ಭಾ ವಿಾಟಿಂಗು Edited, Printed and Publishd
Krishna Rao at the
Chamaraja

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟದು)

ಸಂಪುಟ 31 ಸಂಚಿಕೆ 93] ಸೋಮವಾರ 9—2—48 [ಬಿಡಿ ಪ್ರತಿ 3 ಪೈ

ಸುದ್ದಿಗಳು

ಮೈಸೂರು— ಶ್ರೀ ಕೃಷ್ಣರಾಜೇಂದ್ರ ಮಿಲ್ಲಿನ ಕೆಲಸಗಾರರು ಮಿಲ್ ಲೇಬರ್ ಕಾಲನಿಯಲ್ಲಿನ ರಾಮಚಂದ್ರ ಪಾರ್ಕಿನಲ್ಲಿ ಜನರಲ್ ಮ್ಯಾನೇಜರ ಅಧ್ಯಕ್ಷತೆಯಲ್ಲಿ ಸಭೆಸೇರಿ, ಸೌಹಾರ್ದ, ಸತ್ಯ, ಪ್ರೇಮ, ಅಹಿಂಸಾ ಮೂರ್ತಿಯೂ ಶಾಂತಿ ದೂತನೂ, ಪೂರ್ಣ ಜೀವಮಾನವನ್ನೇ ಹಿಂದುಳಿದವರ ಮತ್ತು ಒಡವರ ಅಭ್ಯುದಯಕ್ಕೆ ಸಮರ್ಪಿಸಿದಾತನೂ ಆದ ಮಹಾತ್ಮಾ ಗಾಂಧೀಜಿಯವರ ನಿಧನದ ಬಗ್ಗೆ ಸಂತಾಪ ನಿರ್ಣಯವು ಸರ್ವಾನುಮತದಿಂದ ಮಂಜೂರಾಯಿತು.

ಮೈಸೂರು— ಶುಕ್ರವಾರ ಪ್ರಥಮತಃ ಖಾಸಗಿ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ನಡೆದ ಪೌರಸಭೆಯಲ್ಲಿ ಗಾಂಧೀಜೀ ನಿಧನದ ಬಗ್ಗೆ ಸಂತಾಪ ಸೂಚಿಸಲಾಯಿತು —ಅಧ್ಯಕ್ಷರಿಗೆ ಮಾಸಿಕವಾಗಿ ರೂ. 200 ಅಲೌಯನ್ಸನ್ನು ಮತ್ತು ಒಂದು ಮೋಟಾರು ಕಾರು ಕೊಡಲು ನಿರ್ಣಯಿಸಲಾಯಿತು.

ವುಡ್‌ಲ್ಯಾಂಡ್ಸ್

ಕೀರ್ತಿದಾಯಕ 4 ನೆ ವಾರ

DIN-RAAT

ಸ್ನೇಹಪ್ರಭಾ
ಸುರೇಶ್ ಬ್ಯಾನರ್ಜಿ
ಪಾತ್ರವಹಿಸಿರುವ

ದಿನ್-ರಾತ್

(ಅಮೋಘ ಹಿಂದೀ ಚಿತ್ರ)

— Karnataka Films Release —

ಮುಸ್ಲಿಂ ನ್ಯಾಷನಲ್ ಗಾರ್ಡ್ ಶಾಸನಬಾಹಿರ ಸಂಸ್ಥೆ

ಮುಸ್ಲಿಂ ಲೀಗು ನ್ಯಾಷನಲ್ ಗಾರ್ಡ್ ಸಂಸ್ಥೆಯನ್ನು ಗೌರ್ನರ್ ಮತ್ತು ಚೀಫ್ ಕಮಿಷನರ್ ಪ್ರಾಂತ್ಯಗಳಲ್ಲಿ ಅಕ್ರಮಕೂಟ ಎಂದು ಭಾರತ ಸರಕಾರ ಸಾರಿದೆ.

ನವದೆಹಲಿ— ಡೆಲ್ಲಿಯ ಮುಸ್ಲಿಂರು ಗಾಂಧೀಜಿ ಬೂದಿಯನ್ನು ಜುಮ್ಮಾ ಮಸೀದಿ ಎದುರಿಗಿರುವ, ಔರಂಗಜೇಬಿನ ಕಾಲದ ಪ್ರಸಿದ್ಧ ಸಾಧು 'ಹಾಂತಾಬಾರಾ'ವಿನ ಗೋರಿಯ ಹತ್ತಿರ ಹೂಳಲು ನಿರ್ಧರಿಸಿರುವರು.

ಬೆಂಗಳೂರು ಫೆ 7— ಭಾರತ ಡೊಮಿನಿಯನ್ನಿನಲ್ಲಿ ಪ್ರಕಟಿಸಿರುವಂತೆ ತಾ॥ 12 ಗಾಂಧೀಜೀ ಜ್ಞಾಪಕಾರ್ಥವಾಗಿ ಶೋಕದಿನವಾಗಿ ಭಾವಿಸಲ್ಪಡುವದೆಂದು ಮೈಸೂರು ಸರಕಾರ ಘೋಷಿಸಿದೆ. ಮತ್ತು ಆ ದಿನ ಸರಕಾರಿ ರಜಾದಿನವಾಗಿದ್ದು ಸಂಸ್ಥಾನಾವಳಿ ಮೆರವಣಿಗೆ ಮತ್ತು ಸಭೆಗಳನ್ನು ನಡೆಸಬೇಕೆಂದೂ ಕೋರಲಾಗಿದೆ.

ಮೈಸೂರು— ಜೋಗ್ ಹೈಡ್ರೊ ಎಲೆಕ್ಟ್ರಿಕ್ ವರ್ಕ್ಸ್‌ಗೆ ಗಾಂಧೀಜೀಯವರ ಹೆಸರಿಡಲಾಗುವುದೆಂದು ತಿಳಿಯಬಂದಿದೆ.

At Opera

ಯಶಸ್ವಿ 2 ನೇ ವಾರ

ಕನ್ನಂಬಾ, ಚಿನ್ನಪ್ಪ
ಕೃಷ್ಣ, ಮಧುರಂ
ಪಾತ್ರವಹಿಸಿದುವ

ಕನಗಿ

ಗಾಂಧೀಜೀ ಜೀವನ
ರಸಮಯ ಸನ್ನಿವೇಶಗಳು

ಇಂಗ್ಲೆಂಡಿಗೆ ಗಾಂಧೀಜೀ ಹೋದಾಗ ಅಲ್ಲಿಯ ಪತ್ರಿಕೆಗಳು ಅವರನ್ನು ವಿಚಿತ್ರ ರೀತಿಯಲ್ಲಿ ವರ್ಣಿಸಿದವು. ಅವರ ನೈಶಾಲ್ಯ ಔದಾರ್ಯಗಳನ್ನು ಚಿತ್ರಿಸಿದರು. ಒಬ್ಬ ಪತ್ರಿಕೋದ್ಯೋಗಿ ಹದ್ದುಮೀರಿ ವರ್ಣಿಸಿ 'ಪ್ರಿನ್ಸ್ ಆಫ್ ವೇಲ್ಸ್' ಹಿಂದೂಸ್ಥಾನಕ್ಕೆ ಹೋದಾಗ ಗಾಂಧೀಜಿ ಅವರಿಗೆ ನಮಸ್ಕಾರ ಮಾಡಿದರೆಂದು ಗಾಂಧೀಜಿ ಆತನನ್ನು ಕರೆಸಿ ಹೇ — 'ಅಯ್ಯಾ ಕೆಡುಬಡವನಾದಿಗುಡಿಸುವವನ ಮುಂದೆ, ಹೊಲಿಗೆ ಸಾಷ್ಟಾಂಗ ನಮಸ್ಕಾರಮಾಡಿಯೇ ಸಾವಿರಾರು ವರ್ಷ ಅವರನ್ನು ಕೆಳಹಾಕಿ ತುಳಿದಿದ್ದಕ್ಕೆ ಅವರ ಕ್ಷಮೆ ಕೇಡಬಲ್ಲೆ. ಅವರ ಪಾವನಪೂಳಿಯನ್ನು ನನ್ನ ತಲೆಯ ಮೇಲೆ ಇಟ್ಟುಕೊಳ್ಳಲ್ಲೆ. ಆದರೆ 'ಪ್ರಿನ್ಸ್ ಆಫ್ ವೇಲ್ಸ್' ಅಲ್ಲ: ಚಕ್ರವರ್ತಿಯ ಮುಂದೆ ಕೂ ನಮಸ್ಕಾರ ಮಾಡಲಾರೆ.'

ಗಾಂಧೀಜೀ ಗುಣಗಾನ
ಧರ್ಮ ಸಮ್ಮೇಳನದಲ್ಲಿ

ಅಲಹಾಬಾದು ಫೆ 8— ಅಖಿಲ ಭಾರತ ಧರ್ಮ ಸಂಘದ ಏಳನೇ ವಾರ್ಷಿಕ ಸಮ್ಮೇಳನವು ಜಗದ್ಗುರು ಜ್ಯೋತಿಷ್ಪೀಠದ ಧಾರ್ಮಿ ಸ್ವಾಮಿಯವರ ಅಧ್ಯಕ್ಷತೆಯಲ್ಲಿ ಜರುಗಿತು. ಶ್ರೀ ಶಾರದಾ ಪೀಠಾಧೀಶ ಶ್ರೀ ಜಗದ್ಗುರು ಶಂಕರಾಚಾರ್ಯರು ಸಮ್ಮೇಳನವನ್ನು ಪ್ರಾರಂಭಗೊಳಿಸುತ್ತಾ, ಆರ್ಯ ಸಂಸ್ಕೃತಿಯ ಸನಾತನಧರ್ಮದ ಪ್ರಾಮುಖ್ಯತೆಯನ್ನು ವಿವರಿಸಿದರು. ಸಮ್ಮೇಳನದ ಸ್ವಾಗತಾಧ್ಯಕ್ಷ ಬ್ರಹ್ಮಚಾರಿ ಪ್ರಭುದತ್ತಜೀಯವರ ಲಿಖಿತ ಭಾಷಣವು ಓದಲ್ಪಟ್ಟಿತು. ಅದರಲ್ಲಿ ಗಾಂಧೀಜೀಯವರ ಬಗ್ಗೆ ಅತ್ಯಂತ ಗೌರವಯುತ ಗುಣಗಾನ ಮಾಡಲಾಗಿತ್ತು. ಜಗದ್ಗುರು ಜ್ಯೋತಿಷ ಪೀಠಾಧೀಶ್ವರರನ್ನು ಅಧ್ಯಕ್ಷಪದಕ್ಕೆ ಮಹಾಮಹೋಪಾಧ್ಯಾಯ ಗಿರಿಧರ ಶಾಸ್ತ್ರಿಗಳಿಂದ ಸೂಚಿಸಲ್ಪಟ್ಟು, ಪಂಡಿತ್ ಅಖಿಲಾನಂದಜೀ, ಪಂ॥ ಮಾಧವಾಚಾರ್ಯಜೀ ಮತ್ತು ಪಂ॥ ಶುಕರಾತಾನಂದಜೀಯವರುಗಳಿಂದ ಅನುಮೋದಿಸಲ್ಪಟ್ಟ ನಿರ್ಣಯವು ಅಂಗೀಕೃತವಾಯಿತು. ಅಧ್ಯಕ್ಷ ಭಾಷಣವು ಶಾಸ್ತ್ರಿ ಚಂದ್ರಶೇಖರ ಸ್ವಾಮಿಗಳಿಂದ ಪಠಿಸಲ್ಪಟ್ಟಿತು. ಕರಸ್ಥಾಗಳ್ಳ

ತಾ॥ 9-2-48 ॥ ಶ್ರೀ॥ ನಂ. 74

"ಪ್ರಬೋಧ"

ಮೈಸೂರು ದೇಶೀಯ ವರ್ಣಾಶ್ರಮ ಸ್ವರಾಜ್ಯ ಸಂಘದ
ಬೋಧಪ್ರದ ಸಪ್ತಾಹಿಕ ಪ್ರಕಟನಮಾಲೆ

ಸಂಪಾದಕ; ಗುಂಡ್ಮಿ ಮಹಾಬಲಭಟ್ಟ, ವೇದಾಂತಶಿರೋಮಣಿ ವೇದಾಂತವಿಶಾರದ
ಸಂಘದ ಕಾರ್ಯದರ್ಶಿ, ದೂವರ್ಸಪುರಂ, ಶಿವಮೊಗ್ಗಾ ಜಿಲ್ಲಾ

ದೇವಾಲಯ ಪ್ರವೇಶ

(ಕಳೆದ ಸಂಚಿಕೆಯಿಂದ ಮುಂದುವರಿದುದು)

ದೇವಾಲಯ ಪ್ರವೇಶದಲ್ಲಿ ಅಧಿಕಾರ ಎಲ್ಲವಿದ್ದಾಗ್ಯೂ ಅವರಿಗೆ ದೇವಾಲಯ ಪ್ರ ಕಲಶದರ್ಶನದಿಂದಾಗುವ, ಸ್ಪೃಶ್ಯ ರಿಗೂ ಪ್ರವೇಶವಿಲ್ಲದ ದಿವ್ಯಪುಣ್ಯದಲ್ಲಿ ಧಿಕಾರವಿದೆ,

ಅಸ್ಪೃಶ್ಯರಿಗೆ ವೈದಿಕ ಸಂಸ್ಕಾರಗಳ ಲ್ಲಿ ಅಧಿಕಾರವಿಲ್ಲದುದರಿಂದ ಅ ವ ರ ವರಲೋಕದ ಮಾರ್ಗವು ತಡೆಗಟ್ಟಿಲ್ಲ ಒಂದು ವೇಳೆ ಅವರು ಮಾರ್ಗಭ್ರಷ್ಟ ರು ಕುತಂತ್ರಕ್ಕೊಳಗಾಗಿ ಶಾಸ್ತ್ರವಿದ್ರೋ ಹವನ್ನು ಮಾಡದಿದ್ದಲ್ಲಿ ಸಂಸಾರ ಸಾ ಗರದಿಂದ ಪಾರಾಗುವುದಂತಿರಲಿ ಸಂದೇ ಹವೇ ಇಲ್ಲದಷ್ಟು ಅವರ ಪರಲೋಕದ ಹಾದಿಯು ಅಗಲವಾಗಿದೆ.

ಶೂದ್ರರ ಸಂತರಣದಲ್ಲಿ ಅನುಕೂಲ್ಯ ವಿರುವುದರಿಂದ, ವೇದಗಳನ್ನು ವಿಭಾಗಿ ಸಿದ, ಅಷ್ಟಾದಶ ಪುರಾಣಗಳನ್ನು ರಚಿ ಚಿದ. ಭಾರತ ವಿಧಾತೃವೂ, ಎಷ್ಟುವಿನ ಅವತಾರವೂ ಆದ ಸಾಕ್ಷಾತ್ ಭಗವಾ ವ್ಯಾಸರು 'ಶೂದ್ರರು ಧನ್ಯರು, ಶೂದ್ರ ರು ಧನ್ಯರು' ಎಂದು ಹೇಳಿರುವರು. ಸ್ಪೃಶ್ಯಾಸ್ಪೃಶ್ಯತೆಯಿಂದ ಆದರ-ಅನಾ ದರಗಳಿಗೇನೂ ನಮ್ಮಲ್ಲಿ ಸಂಬಂಧವಿಲ್ಲ. ಸಮಯಬಂದಾಗ ನಮ್ಮ ತಾಯಿ ಸೋ ದರಿಯರೂ ಅಸ್ಪೃಶ್ಯರಾಗಿರುತ್ತಾರೆ, ನಾವು ಸ್ವಯಂ ಅಸ್ಪೃಶ್ಯರಾಗುತ್ತೇವೆ, ನಮ್ಮ ಅಂಗಗಳಲ್ಲಿಯೇ ಅಸ್ಪೃಶ್ಯವಾದ ಅಂಗಗಳಿವೆ.

ಆದ್ದರಿಂದ ಅಸ್ಪೃಶ್ಯರ ದೇವಾಲಯ ಪ್ರವೇಶಕ್ಕೆ ನಾವು ವಿರುದ್ಧವಾಗಿರುವು ದಾದರೆ, ಅವರ ಕಲ್ಯಾಣದ ಸಲುವಾಗಿ ಗಳ ಮರ್ಯಾದಾಪಾಲ ಹಿತಕ್ಕೆ ವಿರುದ್ಧವಾಗಿಯೇನೂ ಇರುವು ದಿಲ್ಲ.

ಹಿಂದ ತ್ವೇನ ಎಲ್ಲರೂ ಒಂದೇ ಆ ದಾಗ್ಯೂ ಎಲ್ಲರಿಗೂ ಎಲ್ಲದರಲ್ಲಿ ಅಧಿ ಕಾರ ಎಂ ವುದಿಲ್ಲ. ಬಾರ್ಹಸ್ಪತ್ಯ ಯಾಗವನ್ನು ಬ್ರಾಹ್ಮಣರೇ ಮಾಡಬಹು ದು, ಉಳಿದ ನಾಲ್ಕು ವರ್ಣಗಳು ಮಾ ಡಲಾರವು ರಾಜಸೂಯವನ್ನು ಕ್ಷತ್ರಿ ಯರು ಮಾತ್ರ ಮಾಡಬಲ್ಲರು, ಬ್ರಾಹ್ಮಣ ವೈಶ್ಯರಿಗೆ ಮಾಡಲಾಗದು. ವಾಸ್ತು ಮಂಡಲದಲ್ಲಿ ಸಿಷ್ಟಾದನು ಮಾತ್ರ ಮಾಡಬಹುದು. ಬ್ರಾಹ್ಮಣಾದಿಗಳು ಮಾಡಲಾರರು ತಮ್ಮತಮ್ಮ ಸ್ನಾನ ದಲ್ಲಿ ಎಲ್ಲರಿಗೂ ಮಹತ್ವವಿದೆ. ಎಲ್ಲರ ಉಪಯೋಗವಿದೆ ಯಾವ ರೀತಿ ಬ್ರಾ ಹ್ಮಣನಿಗೆ ಅವನ ಬ್ರಾಹ್ಮಣ ಧರ್ಮದ ಗರ್ವವು ಉಚಿತವಾಗಿದೆಯೋ ಅದೇ ರೀತಿ ಶೂದ್ರನಿಗೆ ಅವನ ಧರ್ಮದ ಗರ್ವ ವಿರಬೇಕು. ನೋಡಿರಿ, ಗಾಂಧೀಜಿ ಯೂ ಸಹ 'ನಮಗೆ ನಾವು ಹಿಂದೂ ಗಳಾಗಿರುವೆವೆಂಬ ಗರ್ವವಿದೆ' ಎಂದು ಹೇಳುತ್ತಾರೆ.

ತಾತ್ಪರ್ಯವೇನೆಂದರೆ— ಅಸ್ಪೃಶ್ಯ ಜಾತಿಯು ಹಿಂದುವಾಗಿದೆ, ಅ ವ ರಿಗೆ ತಾವು ಹಿಂದೂಗಳಾಗಿರುವೆವೆಂಬ ಗರ್ವ ವಿರಬೇಕು; ಹಿಂದೂಶಾಸ್ತ್ರದ ವಚನ ವನ್ನು ಆದರಿಸಬೇಕು. ದೇವಾಲಯ ಪ್ರವೇಶದಲ್ಲಿ ಅವರಿಗೇನೂ ಲಾಭವಿಲ್ಲ, ಮತ್ತು ಶಾಸ್ತ್ರವು ಅಡ್ಡಿಪಡಿಸುತ್ತಾ ದ್ದರಿಂದ ದೇವಾಲಯ ಪ್ರವೇಶವನ್ನು ಮಾಡದಿರುವುದರಲ್ಲಿಯೇ ಅವರ ಹಿಂದು ತ್ವವಿದೆ. ಇತರರ ದೇವಾಲಯ ಪ್ರವೇಶ ಕ್ಕಿಂತ ನಮ್ಮ ಕಲಶದರ್ಶನವು ಎಷ್ಟೋ ಅಧಿಕವೆಂಬ ವಿಷಯದಲ್ಲವರೆಗೆ ಗರ್ವ

ಧರ್ಮ ಸಮ್ಮೇಳನ

ಅಲಹಾಬಾದ್, ಫೆ 6 — ಶ್ರೀ ದ್ವಾರಕಾ ಪೀಠಾಧೀಶ್ವರ ಶ್ರೀ ಜಗದ್ಗು ರು ಶಂಕರಾಚಾರ್ಯರು ಅಲಹಾಬಾದ್ ಎಕ್ಸ್‌ಪ್ರೆಸ್ ರೈಲಿನಲ್ಲಿ ಇಲ್ಲಿಗೆ ನಿನ್ನೆ ಆ ಗಮಿಸಿದರು. ಧರ್ಮ ಸಂಘಗಳ ಕಾ ರ್ಯದರ್ಶಿಗಳಾದ ಶ್ರೀ ಸ್ವಾಮಿಜೀ ಕೇ ಶೋವಾಶ್ರಂ ಶಾಸ್ತ್ರಿ, ಮಾಯಾದ ಶ್ರಜೀ ಮತ್ತಿತರರುಗಳಿಂದ ಹೃತ್ಪೂರ್ವ ಕ ಸ್ವಾಗತ ದೊರೆಯಿತು. ಅಲಹಾ ಬಾದ್ ವಿಶ್ವವಿದ್ಯಾನಿಲಯ ಸಂಸ್ಕೃತ ಪ್ರೊಫೆಸರ್ ಆದ ಶ್ರೀಯುತ ಪ್ರಸನ್ನ ಕು ಮಾರ ಆಚಾರ್ಯರವರ ಬಂಗಲೆಗೆ ಕಾರಿನ ಲ್ಲಿ ಮೆರವಣಿಗೆಯಿಂದ ಶ್ರೀ ಜಗದ್ಗುರುಗ ಳನ್ನು ಕರೆದುಕೊಂಡು ಹೋಗಲಾಯಿ ತು. ಸ್ನಾನ ಪ್ರಾರ್ಥನೆ ಭೋಜನೇ ತ್ಯಾದಿಗಳು ಆದ ತರುವಾಯ ಸನ್ಯಾಸಿ ಗಳ ಮತ್ತು ಧರ್ಮಸಂಘ ಸ್ವಯಂ ಸೇ ವಕರುಗಳ ಪ್ರದೇಶ ಗಾನುಗಪಟ್ಟಿಯಲ್ಲಿ ಶ್ರೀ ಜಗದ್ಗುರುಗಳಿಗಾಗಿ ವಿಶೇಷ ನಿರ್ಮಾ ಣವಾದ ಧರ್ಮಸಂಘ ಶಿಬಿರಕ್ಕೆ ಮೆ ರವಣಿಗೆಯಿಂದ ಕರೆದುಕೊಂಡುಹೋದ ರು. ಶ್ರೀ ಜಗದ್ಗುರುಗಳ ಗೌರವಾರ್ಥ ಸರ್ಕಾರದ ಪಾದ ಮತ್ತು ಸವಾರ ಪೋ ಲೀಸರು ಮೆರವಣಿಗೆಯೊಡನೆ ತೆರಳಿದರು, ಪ್ರಮುಖ ರಸ್ತೆಗಳಲ್ಲಿ 'ಧರ್ಮಾಕಿ ಜೈ' ಎಂಬ ಘೋಷಣೆಗಳೊಡನೆ ಮೆರವಣಿಗೆ ಮುಂದುವರಿಯಿತು. ಮಧ್ಯಾಹ್ನ ಶ್ರೀ ಜ ಗದ್ಗುರುಗಳು ಸನ್ಯಾಸಿಗಳ ಸಭೆಯಲ್ಲಿ ಸನ್ಯಾಸಿಗಳ ಕರ್ತ ವ್ಯ ಮತ್ತು ಕಾರ್ಯಗಳ ಮೇಲೆ ಹೃದ ಯಂಗಮ ಭಾಷಣ ಮಾಡುತ್ತಾ ಸನ್ಯಾ ಸಿಗಳ ತಂಬೇತು ಶಾಲೆಯು ಅಗತ್ಯದ ಬ ಗ್ಗೆ ಒತ್ತಿ ಹೇಳಿದರು.

ಶ್ರೀ ಜಗದ್ಗುರು ಜ್ಯೋಷ ಬದ್ರಿನಾಥ್ ರವರು ಅಧ್ಯಕ್ಷ ಭಾಷಣದಲ್ಲಿ ಶ್ರೀ ಜಗ ದ್ಗುರುಗಳ ಅಭಿಪ್ರಾಯಗಳನ್ನು ಪುಷ್ಟೀ ಕರಿಸಿದರು.

ಸ್ವಾಮಿಜಿ ಕರಪಾತ್ರೀಜಿಯವರು ಚಾರ್ಯರುಗಳಿಗೆ ಅಭಿನಂದಿಸಿ ಸಭೆಯ ನವನ್ನು ಮುಕ್ತಾಯಗೊಳಿಸುತ್ತಾ ಧರ್ಮಿಕತೆಯನ್ನು ಎಚ್ಚರಿಸಬೇಕೆಂದು ಸಭಿಕರಲ್ಲಿ ವಿನಂತಿ ಮಾಡಿಕೊಂಡರು.

ಈ ದಿವಸ ಸಾಧು ಸಮ್ಮೇಳನ ನೇ ರುವುದು.

ಅಲಹಾಬಾದ್, ಫೆ 7 — ಶ್ರೀ ದ್ವಾರಕಾಪೀಠಾಧೀಶ್ವರ ಶ್ರೀ ಜಗದ್ಗು ರು ಶಂಕರಾಚಾರ್ಯರು ಸುಮಾರು ಮುನ್ನೂರು ಮಂದಿ ಸನ್ಯಾಸಿಗಳ ಸಂಗ ಡ ಧಾರ್ಮಿಕ ಸಂಪ್ರದಾಯಗಳಿಗನುಸಾ ರವಾಗಿ ಏಕಾದಶಿ ಸ್ನಾನವನ್ನು ತ್ರಿವೇ ಣಿ ಸಂಗಮದಲ್ಲಿ ಸ್ವೀಕರಿಸಿದರು.

ಅಖಿಲ ಭಾರತ ಸಾಧುಗಳ ಸಮ್ಮೇ ಳನ ಶ್ರೀ ಜಗದ್ಗುರು ಶಾರದಾಪೀಠಾಧೀಶ ರ ಅಧ್ಯಕ್ಷತೆಯಲ್ಲಿ ಸೇರಿತು. ಅಖಿಲ ಲ ಸಂಪ್ರದಾಯಗಳ ಮಹಾತ್ಮರುಗಳು ಸುಮಾರು ನಾಲ್ಕುತ್ತು ಸಾವಿರ ಮಂದಿ ಅಧಿವೇಶನದಲ್ಲಿ ಸಮಾವೇಶಗೊಂಡಿ ದ್ದರು.

ಮಹಾತ್ಮ ಗಾಂಧೀಜೀಯವರ ನಿಧ ನದ ಬಗ್ಗೆ ಸಂತಾಪ ಸೂಚಿಸುವ ನಿರ್ಣ ಯವನ್ನು ಮಹಾರಥಿ ಮಾಧವಾಚಾರ್ಯ ಜೀಯವರು ಮಂಡಿಸಿದರು. ನಿರ್ಣಯ ಸರ್ವಾನುಮತದಿಂದ ಅಂಗೀಕೃತವಾ ಯಿತು.

ಗವರ್ನರರು ಧಾರ್ಮಿಕ ವಿಷಯಗಳ ಲ್ಲಿ ಪ್ರವೇಶಿಸಕೂಡದು ಎಂಬ ನಿರ್ಣ ಯವನ್ನು ಅಧ್ಯಕ್ಷರು ಸಭೆಯಿಂದ ಇಟ್ಟರು

ಶ್ರೀ ಕರಪಾತ್ರೀಜಿ ಮತ್ತಿತರ ಸ್ಫೂರ್ತಿದಾಯಕ ಭಾಷಣ ಮಾಡಿದ

ನಿರ್ಣಯ ಸರ್ವಾನುಮತದಿಂದ ಅಂಗೀಕೃತವಾಯಿತು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಆಚಾರ್ಯರುಗಳ ಆಜ್ಞೆಯಂತೆ ನಡೆಯ ಬೇಕೆಂದು ತಿಳಿಸಿದರು

'ಧರ್ಮಾಕಿ ಜೈ' ಘೋಷಣೆ ಯೊಡನೆ ಸಮ್ಮೇಳನ ಮುಗಿಯಿತು.

ಮೈಸೂರು ಸಿಟಿ ಮುನಿಸಿಪಲ್ ಕೌನ್ಸಿಲ್ ಪ್ರೆಸಿಡೆಂಟರ ಆಫೀಸಿನಿಂದಾ

ಪ್ರ ಕ ಟ ಣೆ

ಪೌರಸಭಾಧ್ಯಕ್ಷರು ವಾಣೀವಿಲಾಸ ವಾಟರ್‌ವರ್ಕ್ಸ್ ಸೂಪರಿಂಟೆಂಡಿಂ ಟರವರೊಡನೆ ಮಾತನಾಡಿ, ಮಹಾತ್ಮಾಜೀಯವರ ಕಡೆಯ ಕರ್ಮಾಚರಣೆ ದಿನ ಗಳು ಅಂದರೆ 9 ರಂದಾಗಾಯ್ತು 15 ನೇ ತಾರೀಖುಗಳಲ್ಲಿ ಮೈಸೂರಿನಲ್ಲಿ 24 ಗಂಟೆಗಳ ಕಾಲವೂ ಕೈಲಾಡವಂಟ್ಟಿಗೆ ನೀರನ್ನು ಸಂಪರಾಜು ಮಾಡಲು ಏರ್ಪಡಿಸಿರುತ್ತಾರೆ. ಆ ದಿವಸ ಅನ್ನದಾನಾದಿಗಳನ್ನು ಮಾಡುವ ಗಳಲ್ಲಿ ಅನಾನುಕೂಲ ಸಂಭವಿಸದೇ ಇರಲು ಈ ಏರ್ಪಾ

(ಸಹಿ)

ತಾ॥ 9—2—48